(ದಿನಾಂಕಃ 11.10.2017 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

*ಪಾಟೀ ಸವಾಲು 3 ರಿಂದ 10ನೇ ಪ್ರತಿವಾದಿ ಪರ ಶ್ರೀ. ಬಿವಿಕೆ ವಕೀಲರಿಂದಃ*

ನಾನು 5ನೆ ತರಗತಿವರೆಗೂ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆಯಾ ಎಂದರೆ ಸರಿಯಾಗಿ ಬರುವುದಿಲ್ಲ. ನಾನು ಮೇಡನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನ್ನ ಮದುವೆ 1993ನೇ ಇಸವಿಯಲ್ಲಿ ಆಗಿರುತ್ತದೆ. ಮದುವೆಯಾದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ತಮ್ಮ ಅವನೂ ಕೂಡ ಮೇಡನಹಳ್ಳಿಯಲ್ಲಿ ವಾಸವಾಗಿರುತ್ತಾನೆ. ದಾವೆಯನ್ನು ನಾನೆ ಹಾಕಿರುತ್ತೇನೆ. ಆಸ್ತಿಯಲ್ಲಿ ಭಾಗ ಬರಬೇಕೆಂದು ದಾವೆ ಹಾಕಿರುತ್ತೇನೆ. ನಿ.ಪಿ.5ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ.5ರಲ್ಲಿ ನನ್ನ ತಂದೆ ಮತ್ತು ಇತರ ಸಹೋದರರು ವಿಭಾಗ ಮಾಡಿಕೊಂಡು ಅನುಭವಿಸಿಕೊಂಡು ಇದ್ದಾರೆ ಎಂದರೆ ಸರಿ. ಅದರ ಪ್ರಕಾರ ನನ್ನ ತಂದೆಗೆ ಭಾಗದಲ್ಲಿ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.6 ಮತ್ತು ನಿ.ಪಿ.7 ರ ಪ್ರಕಾರ ನನ್ನ ಚಿಕ್ಕಪ್ಪ ಅವರಿಗೆ 1995ರಲ್ಲಿ ಸಾಗುವಳಿ ಚೀಟಿ ಬಂದಿರುತ್ತದೆ ಎಂದರೆ ಸರಿ. ನಿ.ಪಿ.2,11 ರಿಂದ 13,15,16,17 ದಾಖಲೆಗಳ ಹಿಂಬಾಗದಲ್ಲಿ ಇರುವ ನಾಗೇಶ್ ಎನ್ನುವ ಸಹಿ ಯಾರದು ಎಂದರೆ ನನ್ನ ತಮ್ಮನದು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನನ್ನ ತಮ್ಮ ನಾಗೇಶ ಅರ್ಜಿಸಲ್ಲಿಸಿ ಪಡೆದುಕೊಂಡು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.10ರ ಪ್ರಕಾರ ದಿಃ15-2-1994ರಲ್ಲಿನನ್ನ ತಂದೆ ಯೂಲಕ್ಕಪ್ಪನ ಮಗ ಗೋವಿಂದಪ್ಪ ಅವರಿಗೆ

ನನ್ನ ತಂದೆ ಭಾಗಕ್ಕೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಓದಿ ತಿಳಿದುಕೊಂಡಿರುತ್ತೇನಾ ಎಂದರೆ ತಿಳಿದುಕೊಂಡಿರುವುದಿಲ್ಲ. ಸದರಿ ದಾಖಲೆಗೆ ನನ್ನ ತಮ್ಮ ನಾಗೇಶ ಕ್ರಯಕೊಡುವ ಸಮಯದಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಮಾಡಿದ ದಾಖಲೆಗಳಲ್ಲಿ ಏನು ವಿವರಗಳು ಇರುತ್ತದೆ ಎಂದು ಗೊತ್ತಿರುತ್ತದೆಯಾ ಎಂದರೆ ಗೊತ್ತಿರುವುದಿಲ್ಲ.

3 ರಿಂದ 10 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯವನ್ನು ಕೋರಿದ್ದು, ಸಮಯವನ್ನು ನೀಡಲಾಯಿತು

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎಂ ಒ

ಕೆ. ಶ್ರೀವಿದ್ಯಾ
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ರಾಮನಗರ.